C.R.P.67

Form No.4 (Civil)
Deposition Sheets
(R.P.No.57)

## 1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.

## ಸ್ಪೆಷಲ್. ಸಿ ಸಂಖ್ಯೆ: 49/2020

**ಪ್ರಾಸಾ. 03 ಚಾಸಾ. 04**

**ಸಾಕ್ಷಿದಾರರ ಹೆಸರು** : ಗೋವಿಂದರಾಜು.

**ತಂದೆಯ ಹೆಸರು** : ಹನುಮಂತರಾಯಪ್ಪ

**ವಯಸ್ಸು** : 42 ವರ್ಷಗಳು

**ಉದ್ಯೋಗ** : ವ್ಯವಸಾಯ

**ವಾಸ** : ಉಜಿನಿ, ಹೊಸಹಳ್ಳಿ, ದೊಡ್ಡಬಳ್ಳಾಪುರ ತಾಲ್ಲೂಕು.

## ಪ್ರಮಾಣ ವಚನ ಬೋಧಿಸಿದ ದಿನಾಂಕ: 04.10.2024

## ಮುಖ್ಯ ವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರಿಂದ

ಈಗ ತೋರಿಸಿದ ನಿ.ಪಿ-1 ರಿಂದ 3 ದಾಖಲೆಯಲ್ಲಿ ನನ್ನ ಸಹಿ ಇರುತ್ತದೆ. ಸದರಿ ದಾಖಲೆಯಲ್ಲಿರುವ ಸಾಕ್ಷಿಯ ಸಹಿಗಳನ್ನು ಕ್ರಮವಾಗಿ ನಿ.ಪಿ-1(ಬಿ), ನಿ.ಪಿ-2(ಬಿ) ಮತ್ತು ನಿ.ಪಿ-3(ಬಿ) ಎಂದು ಗುರುತಿಸಲಾಯಿತು. ಸುಮಾರು 6 ವರ್ಷಗಳ ಹಿಂದೆ ಸದರಿ ದಾಖಲೆಗಳಿಗೆ ನಾನು ಉಜಿನಿ ಗ್ರಾಮದ ಗೌರಮ್ಮನ ಕೆರೆ ಬಳಿ ಹಾಕಿರುತ್ತೇನೆ. ದಿನಾಂಕ 26.08.2018 ರಂದು ನಾನು ಹೊಸಹಳ್ಳಿಯಲ್ಲಿದ್ದೆ ಆಗ ಪೋಲೀಸರು ಅಲ್ಲಿಗೆ ಬಂದು ನನ್ನನ್ನು ಕರೆದರು. ಆಗ ನಾನು ಏನೆಂದು ಪೋಲೀಸರನ್ನು ವಿಚಾರಿಸಿದಾಗ ಆಗ ಪೋಲೀಸರು ಗೌರಮ್ಮನ ಕೆರೆಯಲ್ಲಿ ಒಬ್ಬ ಕುರಿ ಕಾಯುವ ಹುಡುಗನ ಹೆಣ ಬಿದ್ದಿರುತ್ತದೆ, ಅಲ್ಲಿಗೆ ಹೋಗಬೇಕು ನಮ್ಮ ಜೊತೆ ಬನ್ನಿ ಎಂದು ತಿಳಿಸಿದರು. ಆಗ ನಾನು ಪೋಲೀಸರ ಜೊತೆ ಹೊಸಹಳ್ಳಿ ಪೋಲೀಸ್ ಠಾಣೆಗೆ ಹೋದೆ. ಆಗ ಸಮಯ ಬೆಳಗ್ಗೆ 11-00 ಗಂಟೆ ಆಗಿತ್ತು. ಪೋಲೀಸ್ ಠಾಣೆಯಲ್ಲಿ ಪೋಲೀಸರವರು, ತಹಸೀಲ್ದಾರ್ ರವರು ಹಾಗೂ 6ನೇ ಆರೋಪಿ ಮುನಿರಾಜು, ಚಾ.ಸಾ.2

ಮತ್ತು 3 ರವರು ಇದ್ದರು. 6ನೇ ಆರೋಪಿ ಪೋಲೀಸರ ಮುಂದೆ ಒಬ್ಬ ಕುರಿ ಕಾಯುವ ಹುಡುಗನ ಹೆಣವನ್ನು ಕೆರೆಯ ಬಳಿ ಹೂತು ಹಾಕಿರುತ್ತೇವೆ ಎಂದು ಹೇಳಿದನು ಮತ್ತು ಸದರಿ ಸ್ಥಳವನ್ನು ತೋರಿಸುವುದಾಗಿ ಹೇಳಿದನು. ನಂತರ ನಾನು ಮತ್ತು ಚಾ.ಸಾ.2 ನಂಜುಂಡಪ್ಪ ಗೌರಮ್ಮನ ಕೆರೆ ಬಳಿಗೆ ಬೈಕ್ ನಲ್ಲಿ ಹೋದೆವು. ಪೋಲೀಸರು, ತಹಸೀಲ್ದಾರ್ ಹಾಗೂ 6ನೇ ಆರೋಪಿ ಸದರಿ ಸ್ಥಳಕ್ಕೆ ಜೀಪಿನಲ್ಲಿ ಬಂದರು. ನಾನು ಕರೆ ಬಳಿ ಹೋದಾಗ ಸುಮಾರು ಜನ ಸೇರಿದ್ದರು.

2. ಸದರಿ ಸ್ಥಳದಲ್ಲಿ ಗುಂಡಿ ತೆಗೆಯಲು ಕೂಲಿ ಕೆಲಸಗಾರರು ಬಂದಿದ್ದರು. 6ನೇ ಆರೋಪಿ ಪೋಲೀಸರು ಮತ್ತು ತಹಸೀಲ್ದಾರ್ ರವರಿಗೆ ಕೆರೆಯ ಬಳಿಯ ಒಂದು ಸ್ಥಳವನ್ನು ತೋರಿಸಿ ಸದರಿ ಸ್ಥಳದಲ್ಲಿ ಕುರಿ ಕಾಯುವ ಹುಡುಗನ ಶವವನ್ನು ಹೂತು ಹಾಕಿರುವುದಾಗಿ ತಿಳಿಸಿದನು. ನಂತರ ಕೂಲಿ ಕಾರ್ಮಿಕರು ಸದರಿ ಸ್ಥಳದಲ್ಲಿ ಮಣ್ಣನ್ನು ಅಗೆದು ತೆಗೆದರು. ಮಣ್ಣನ್ನು ತೆಗೆದ ಮೇಲೆ ಅಲ್ಲಿ ಒಂದು ಗಂಡಸಿನ ಶವ ಸಿಕ್ಕಿತು. ನಂತರ ಕೂಲಿ ಕೆಲಸಗಾರರು ಸದರಿ ಶವಕ್ಕೆ ಹಗ್ಗವನ್ನು ಕಟ್ಟಿ ಮೇಲಕ್ಕೆ ಎಳೆದರು.

3. ಶವದ ಮೇಲೆ ಒಂದು ಬನಿಯನ್, ಲುಂಗಿ, ಒಂದು ಅಂಡರ್ ವೇರ್, ಕೈಯಲ್ಲಿ ವಾಚು, ಒಂದು ಮೊಬೈಲ್ ಫೋನು ಇದ್ದವು. ಶವದ ಚರ್ಮ ಬೆಳ್ಳಗೆ ಆಗಿತ್ತು ಮತ್ತು ವಾಸನೆ ಬರುತ್ತಿತ್ತು. ಸ್ಥಳಕ್ಕೆ ಇಬ್ಬರು ವೈದ್ಯರು ಬಂದಿದ್ದರು. ಅವರು ಸ್ಥಳದಲ್ಲೇ ಶವದ ಮರಣೋತ್ತರ ಪರೀಕ್ಷೆ ಮಾಡಿದರು. ಸದರಿ ವ್ಯಕ್ತಿ ಹೇಗೆ ಸತ್ತ ಎಂದು ನನಗೆ ಗೊತ್ತಾಗಲಿಲ್ಲ. ಶವದ ಫೋಟೋಗಳನ್ನು ನೋಡಿದರೆ ಗುರುತಿಸಬಲ್ಲೆ. ಈಗ ತೋರಿಸಿದ ನಿ.ಪಿ-4 ಫೋಟೋದಲ್ಲಿ ಕಾಣುವ ವ್ಯಕ್ತಿ ಮೃತ ಹುಡುಗನಾಗಿರುತ್ತಾನೆ. ನಿ.ಪಿ-5 ಮತ್ತು 6 ಪೋಲೀಸ್ ಠಾಣೆಯಲ್ಲಿ ತೆಗೆದ ಫೋಟೋಗಳಾಗಿರುತ್ತವೆ. ನಿ.ಪಿ-7 ರಿಂದ 24 ಶವ ದೊರೆದ ಸ್ಥಳದಲ್ಲಿ ತೆಗೆದ ಫೋಟೋಗಳಾಗಿರುತ್ತವೆ. ನಿ.ಪಿ-1 ಎಕ್ಸೂಮೇಷನ್ ಪಂಚನಾಮೆಯನ್ನು ಬೆಳಗ್ಗೆ 11-30 ಗಂಟೆಯಿಂದ ಮಧ್ಯಾಹ್ನ 1-30 ಗಂಟೆವರೆಗೂ ಮಾಡಿರುತ್ತಾರೆ. ನಿ.ಪಿ-3 ಶವ ತನಿಖಾ ವರದಿಯನ್ನು ಮಧ್ಯಾಹ್ನ 2-00 ಗಂಟೆಯಿಂದ 4-00 ಗಂಟೆವರೆಗೂ ಮಾಡಿರುತ್ತಾರೆ.

4. ಸದರಿ ಸ್ಥಳದಲ್ಲಿ ಅಮಾನತುಪಡಿಸಿದ ವಸ್ತುಗಳನ್ನು ನೋಡಿದರೆ ಗುರುತಿಸಬಲ್ಲೆ. ಶವದ ಮೇಲಿದ್ದ ಬಟ್ಟೆಗಳು, ವಾಚು, ಮೊಬೈಲ್ ಫೋನುಗಳನ್ನು ನೋಡುತ್ತಿದ್ದು, ಅವುಗಳನ್ನು ಈಗಾಗಲೇ ಮು.ಮಾ-1 ರಿಂದ ಮು.ಮಾ-8 ಎಂದು ಗುರುತಿಸಲಾಗಿದೆ. 6ನೇ ಆರೋಪಿಯನ್ನು ನೋಡಿದರೆ ಗುರುತಿಸಬಲ್ಲೆ. ಈ ದಿನ 6ನೇ ಆರೋಪಿ ನ್ಯಾಯಾಲಯದ ಮುಂದೆ ನಿಂತಿರುತ್ತಾನೆ. ಸಾಕ್ಷಿಯು 6ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಭಾಗಷಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ವಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಕಡತದಲ್ಲಿರುವ ಅಂಶಗಳನ್ನು ಪರಿಗಣಿಸಲಾಗಿ ಸಾಕ್ಷಿದಾರರು ಅಭಿಯೋಜನೆಯ ಕೇಸಿಗೆ ವಿರುದ್ಧವಾಗಿ ಸಾಕ್ಷಿ ನುಡಿಯುತ್ತಿರುವುದು ಕಂಡುಬರುತ್ತದೆ. ಈ ಕಾರಣದಿಂದ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಅವರನ್ನು ವಾಟೀ ಸವಾಲಿಗೆ ಒಳಪಡಿಸಲು ಮಾನ್ಯ ಸರ್ಕಾರಿ ಅಭಿಯೋಜಕರಿಗೆ ಅನುಮತಿ ನೀಡಲಾಯಿತು)**

**ವಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ**

5. ಆರೋಪಿತರು ದಿನಾಂಕ 19.08.2018 ರಂದು ರಾತ್ರಿ 8-30 ಗಂಟೆಗೆ ಕಾಡುಹಂದಿ ಭೇಟೆಯಾಡಲು ಕಾಮೇಣಹಳ್ಳಿಯಲ್ಲಿರುವ ಶ್ರೀ ಗುಟ್ಟೆ ನರಸಿಂಹಸ್ವಾಮಿ ದೇವಸ್ಥಾನದ ಸಮುದಾಯ ಭವನದ ಹಿಂಭಾಗದಲ್ಲಿ ಮರದ ಗೂಟಗಳನ್ನು ನೆಟ್ಟು, ಅದರ ಮೇಲೆ ಗಾಜಿನ ಖಾಲಿ ಬಾಟಲುಗಳನ್ನು ಇಟ್ಟು, ಬೈಂಡಿಂಗ್ ತಂತಿಯನ್ನು ಗೂಟಗಳಿಗೆ ಅಳವಡಿಸಿ, ತಂತಿಗೆ ವಿಧ್ಯುತ್ ವೈರ್ ಅನ್ನು ಸುತ್ತಿ ಮತ್ತು ರೋಟಿ ಗಳದ ಮುಖಾಂತರ ವೈರ್ ಅನ್ನು ವಿಧ್ಯುತ್ ಕಂಬದ ಲೈನ್ ಗೆ ಅಳವಡಿಸಿ ರಾತ್ರಿ ಸುಮಾರು 9-00 ಗಂಟೆಯಲ್ಲಿ ವಿಧ್ಯುತ್ ಸಂಪರ್ಕ ಕಲ್ಪಿಸಿದರು, ಆ ಸಮಯದಲ್ಲಿ ಮೃತನಿಗೆ ಸದರಿ ವಿಧ್ಯುತ್ ತಂತಿ ತಗುಲಿ ವಿಧ್ಯುತ್ ಶಾಕ್ ನಿಂದ ಮೃತಪಟ್ಟಿದ್ದು, ನಂತರ ಆರೋಪಿಗಳು ಮೃತನ ಶವವನ್ನು ತೆಗೆದುಕೊಂಡು ಬಂದು ಗೌರಮ್ಮನ ಕೆರೆಯಲ್ಲಿ ಹೂತುಹಾಕಿರುವ ಬಗ್ಗೆ ನನಗೆ ತಿಳಿದು ಬಂತು ಎಂದರೆ ಸರಿಯಲ್ಲ.

**ವಾಟೀ ಸವಾಲುಃ ಶ್ರೀ ಪಿ.ವೈ.ಆರ್ ವಕೀಲರಿಂದ 2, 3, 7 ಮತ್ತು 8ನೇ ಆರೋಪಿತರ ಪರವಾಗಿಃ**

6. ನಾನು 8ನೇ ತರಗತಿ ವರೆಗೆ ಓದಿಕೊಂಡಿರುತ್ತೇನೆ. ದಿನಾಂಕ 26.08.2018 ರಂದು ನಾನು ಹೊಸಹಳ್ಳಿಯಲ್ಲಿರುವ ಅಂಗಡಿಯ ಬಳಿ ಇದ್ದೆ. ಪೋಲೀಸರು ನನ್ನನ್ನು ಕರೆದಾಗ ಬೆಳಗ್ಗೆ 11-00 ಗಂಟೆಯಾಗಿತ್ತು. ಚಾ.ಸಾ.3 ಶಂಕರ್ ರಾವ್ ರವರು ನನಗೆ ಪರಿಚಯ ಇರುತ್ತಾರೆ. ಚಾ.ಸಾ.3 ರವರು ಹೊಸಹಳ್ಳಿ ಪೋಲೀಸ್ ಠಾಣೆಯಲ್ಲೇ ಕೆಲಸ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಪುಟ್ಟರಾಜು ಎಂಬ ಪೋಲೀಸರು ನನ್ನನ್ನು ಠಾಣೆಗೆ ಕರೆದಿರುತ್ತಾರೆ. ನಾನು ಠಾಣೆಗೆ ಹೋದಾಗ ಬೆಳಗ್ಗೆ 11-00 ಗಂಟೆ ಆಗಿತ್ತು, ನಾವು ಪೋಲೀಸ್ ಠಾಣೆಯನ್ನು ಬೆಳಗ್ಗೆ 11-10 ಗಂಟೆಗೆ ಬಿಟ್ಟಿರುತ್ತೇವೆ. ಶವ ಯಾರದ್ದು ಎಂದು ನನಗೆ ಗೊತ್ತಿರುವುದಿಲ್ಲ ಎಂದರೆ ಸಾಕ್ಷಿ ಸ್ಥಳದಲ್ಲಿ ಕುರಿ ಕಾಯುವ ಹುಡುಗರು ಬಂದಿದ್ದರು, ಅವರು ಶವವನ್ನು ನೋಡಿ ನಮ್ಮ ಹುಡುಗನ ಶವ ಎಂದು ಗುರುತಿಸಿದರು.

7. ಸ್ಥಳದಲ್ಲಿ ಸುಮಾರು 100 ಜನರ ಮೇಲೆ ಇದ್ದರು.ನಾನು ಶವ ತೆಗೆದ ಸ್ಥಳದ ಹತ್ತಿರವೇ ನಿಂತಿದ್ದೆ. ಪೋಲೀಸರು ಸದರಿ ಸ್ಥಳದಲ್ಲಿ ಬರೆದುಕೊಂಡಿರುತ್ತಾರೆ. ಪೋಲೀಸರು ಏನು ಬರೆದುಕೊಂಡರು ಎಂದು ನನಗೆ ಗೊತ್ತಿರುವುದಿಲ್ಲ ಎಂದರೆ ಸರಿ. ಪೋಲೀಸರು ಕೈಯಲ್ಲಿ ಬರೆದುಕೊಂಡಿದ್ದನ್ನು ನಾನು ನೋಡಿರುತ್ತೇನೆ ಆದರೆ ಪೋಲೀಸರು ದಾಖಲೆಗಳನ್ನು ಟೈಪ್ ಮಾಡಿದ್ದನ್ನು ನಾನು ನೋಡಿರುವುದಿಲ್ಲ. ಶವ ದೊರೆತ ಸ್ಥಳದಿಂದ ಸ್ವಲ್ಪ ದೂರದಲ್ಲಿ ಪೋಲೀಸ್ ಜೀಪ್ ನಿಂತಿತ್ತು.

8. 6ನೇ ಆರೋಪಿ ಎಷ್ಟು ದಿನಗಳಿಂದ ಪೋಲೀಸ್ ಠಾಣೆಯಲ್ಲಿ ಇದ್ದ ಎಂದು ನನಗೆ ಸರಿಯಾಗಿ ಗೊತ್ತಿಲ್ಲ. ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನಾನು ಸುಮಾರು 20-30 ವರ್ಷಗಳಿಂದ ನೋಡಿರುತ್ತೇನೆ. 6ನೇ ಆರೋಪಿ ಕುಂಟ ಮುನಿಯ ಈ ಪ್ರಕರಣದ ಬಗ್ಗೆ ನನ್ನ ಮುಂದೆ ಯಾವುದೇ ವಿಚಾರ ಹೇಳಿರುವುದಿಲ್ಲ ಎಂದರೆ ಸರಿ. ನನಗೆ ಮಹಜರ್ ದಾಖಲೆಗೆ ಸಹಿಮಾಡಿದ್ದನ್ನು ಹೊರತುಪಡಿಸಿ ಈ ಪ್ರಕರಣದ ಬಗ್ಗೆ ಬೇರೆ ವಿಚಾರಗಳು ನನಗೆ ಗೊತ್ತಿರುವುದಿಲ್ಲ ಎಂದರೆ ಸರಿ.

9. ಸ್ಥಳಕ್ಕೆ ಮೊದಲು ಪೋಲೀಸರು ಜೀಪಿನಲ್ಲಿ ಹೋಗಿರುತ್ತಾರೆ. ನಾನು ಹಲವಾರು ಪ್ರಕರಣಗಳಲ್ಲಿ ಮಹಜರ್ ದಾಖಲೆಗಳಿಗೆ ಸಾಕ್ಷಿಯಾಗಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಪೋಲೀಸರ್ ಠಾಣೆಗೂ ಹೋಗಿರುವುದಿಲ್ಲ ಮತ್ತು ಸ್ಥಳಕ್ಕೂ ಹೋಗಿರುವುದಿಲ್ಲ, ನಿ.ಪಿ-1 ರಿಂದ 3 ದಾಖಲೆಗಳಿಗೆ ಪೋಲೀಸ್ ಠಾಣೆಯಲ್ಲೇ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಮೃತನ ಶವವನ್ನು ಸದರಿ ಸ್ಥಳದಲ್ಲಿ ಯಾರು ಹೂತುಹಾಕಿದ್ದರು ಮತ್ತು ಸದರಿ ಶವ ಯಾರದ್ದು ಮತ್ತು ಮೃತನನ್ನು ಯಾವ ಸಮಯದಲ್ಲಿ ಮತ್ತು ಯಾವ ವಿಚಾರಕ್ಕೆ ಹೂತುಹಾಕಿದ್ದರು ಎಂದು ನನಗೆ ಗೊತ್ತಿರುವುದಿಲ್ಲ ಎಂದರೆ ಸರಿ. ಸ್ಥಳದಲ್ಲಿ ಪೋಲೀಸರು ಶವವನ್ನು ಹೊರತೆಗೆದಾಗ ಮಾತ್ರ ನನಗೆ ಸದರಿ ಸ್ಥಳದಲ್ಲಿ ಒಂದು ಶವ ಇರುತ್ತದೆ ಎಂದು ಗೊತ್ತಾಗಿರುತ್ತದೆ ಎಂದರೆ ಸರಿ. ಪೋಲೀಸರು ನನ್ನ ಸಮಕ್ಷಮ ಮು.ಮಾ-1 ರಿಂದ ಮು.ಮಾ-6 ವಸ್ತುಗಳನ್ನು ಅಮಾನತುಪಡಿಸಿಕೊಂಡಿರುವುದಿಲ್ಲ, ಅವುಗಳನ್ನು ನನಗೆ ಪೋಲೀಸ್ ಠಾಣೆಯಲ್ಲಿ ತೋರಿಸಿರುತ್ತಾರೆ ಎಂದರೆ ಸರಿಯಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ವಿಚಾರ ಗೊತ್ತಿರದಿದ್ದರು ಸಹ ನಾನು ಆರೋಪಿತರ ವಿರುದ್ದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪೋಲೀಸರ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ವಾಟೀ ಸವಾಲುಃ ಶ್ರೀಮತಿ. ಎಸ್.ಪಿ. ವಕೀಲರಿಂದ 1, 4 ರಿಂದ 6 ಮತ್ತು 9 ಹಾಗೂ 10ನೇ ಆರೋಪಿತರ ಪರವಾಗಿಃ</u>**

10. ಪೋಲೀಸರು ನನಗೆ ಸಾಕ್ಷಿಯಾಗಿ ಬರಲು ಯಾವುದೇ ನೋಟೀಸನ್ನು ಜಾರಿ ಮಾಡಿರುವುದಿಲ್ಲ. ವೈದ್ಯರು ಶವವನ್ನು ಹೊರತೆಗೆದ ಮೇಲೆ ಸ್ಥಳಕ್ಕೆ ಬಂದಿರುತ್ತಾರೆ. ಶವ ಹೂತು ಹಾಕಿದ್ದ ಸ್ಥಳವನ್ನು ಪೋಲೀಸರು ತೋರಿಸಿರುತ್ತಾರೆ 6ನೇ ಆರೋಪಿ ತೋರಿಸಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

ಓ. ಹೇ. ಕೇ. ಸ. ಒ.

(ರವೀಂದ್ರ. ಆರ್)
1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.